**ಓ ಎಸ್ ನಂಃ 138-17**
**ಪಿ ಡಬ್ಲ್ಯೂ ಃ 2**

**ದಿಃ 17-07-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ ಜಿ ವಕೀಲರಿಂದ**

23. ಸರ್ವೆ ನಂ 62/1 ರಲ್ಲಿ 31 ಎಕರೆ 02 ಗುಂಟೆ ಜಮೀನು ಯಾರ ಹೆಸರಿನಲ್ಲಿತ್ತು ದಾಖಲೆಗಳನ್ನು ನೋಡಿ ಹೇಳಬಹುದು. ದಾಖಲೆಗಳನ್ನು ನೋಡದೆ ನನಗೆ ಈ ವಿಷಯದ ಬಗ್ಗೆ ಹೇಳಲು ಬರುವುದಿಲ್ಲ ಎಂದರೆ ನಿಜ. ನನ್ನ ಅಜ್ಜಿ ನಂಜಮ್ಮರವರಿಗೆ 1969-70 ರ ವಿಭಾಗ ಪತ್ರದ ಪ್ರಕಾರ 5 ಎಕರೆ ಜಮೀನು ಪಾಲಿಗೆ ಬಂದಿತ್ತು. ಈ ಆಸ್ತಿಯ ಪೂರ್ವಕ್ಕೆ ಸರ್ವೆ ನಂ 63 ಮುನಿಸ್ವಾಮಪ್ಪರವರ ಆಸ್ತಿ ಬರುತ್ತದೆ, ಪಶ್ಚಿಮಕ್ಕೆ ಕೆ ಟಿ ವಿಶ್ವನಾಥ್ ಮತ್ತು ಕೆ ಟಿ ರಾಧಾಕೃಷ್ಣ ರವರ ಆಸ್ತಿ ಬರುತ್ತದೆ, ಉತ್ತರಕ್ಕೆ ಸರೋಜಮ್ಮ ಕೋಂ ಪುಟ್ಟತಿಮ್ಮರಾಯಗೌಡರವರ ಆಸ್ತಿ ಇದೆ, ದಕ್ಷಿಣಕ್ಕೆ ನನ್ನ ಅಜ್ಜಿ ನಂಜಮ್ಮರವರ ಆಸ್ತಿ ಇದೆ. ಮೇಲೆ ಹೇಳಿದ ಆಸ್ತಿಯ ಚಕ್ಕುಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಬೇರೆ ಚಕ್ಕುಬಂದಿ ಬಂದಿದ್ದರೆ ನಾನು ದಾಖಲೆಗಳನ್ನು ನೋಡಿ ಹೇಳಬಹುದು ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ನಂಜಮ್ಮರವರ ಪಾಲಿಗೆ ಬಂದ 5 ಎಕರೆ ಜಮೀನು 2016-17 ರಲ್ಲಿ ಪೋಡಿಯಾಗಿರುತ್ತದೆ. ಈ ಆಸ್ತಿಯಲ್ಲಿ ಎಷ್ಟು ಎಂ ಆರ್ ನಂಬರುಗಳು ಆಗಿರುತ್ತವೆ ನೆನಪಿಲ್ಲ. ದಾವಾ ಎ ಷೆಡ್ಯೂಲ್ ಆಸ್ತಿ ಹೊಸ ಸರ್ವೆ ನಂ 62/5 2016-17 ರಲ್ಲಿ ಆಗಿರುತ್ತೆ. ದಾವಾ ಎ ಷೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಇರುವ ಸರ್ವೆ ನಂ 63 ನಮ್ಮ ವಿಭಾಗ ಪತ್ರದ ಪ್ರಕಾರ ಮುನಿಸ್ವಾಮಯ್ಯರವರಿಗೆ ಸೇರಿರುತ್ತದೆ. ದಾವಾ ಎ ಷೆಡ್ಯೂಲ್ ಆಸ್ತಿಯ ಉತ್ತರಕ್ಕೆ ಸರೋಜಮ್ಮರವರ ಆಸ್ತಿ ಇರುವುದಿಲ್ಲ ಎಂದರೆ ನಮ್ಮ ವಿಭಾಗ ಪತ್ರದ ಪ್ರಕಾರ ಇರುತ್ತದೆ ಎಂದು ಹೇಳುತ್ತಾರೆ.

24. ನಂಜಮ್ಮರವರ ಜಮೀನಿನ ಚಕ್ಕುಬಂದಿಯನ್ನು ನಾನು ಹೇಳಿದ್ದು ಅದರಲ್ಲಿ ಯಾವ ದಿಕ್ಕಿಗೂ ಒತ್ತುವರಿ ಜಮೀನು ಇದೆ ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಆಸ್ತಿ ಒತ್ತುವರಿ ಆಗಿರುವ ಬಗ್ಗೆ ನನ್ನ ತಂದೆ ಪ್ರತಿವಾದಿಗೆ ನೋಟಿಸ್ ಕೊಡಲು ಬರುವುದಿಲ್ಲ ಆದರೆ ಎ ಡಿ ಎಲ್ ಆರ್ ಮುಖಾಂತರ ನೋಟಿಸನ್ನು ಕೊಡಲಾಗಿದೆ. ನಾವು ಆ ಆಸ್ತಿಯ ನಾಲ್ಕು ದಿಕ್ಕುಗಳ ಮಾಲೀಕರಿಗೆ ನೋಟಿಸ್ ಕೊಡಬೇಕಾಗುತ್ತದೆ ಎಂದರೆ ನೋಟಿಸನ್ನು ಕೊಡಲಾಗಿದೆ ಎಂದು ಹೇಳುತ್ತಾರೆ. ನಾವು ನೋಟಿಸನ್ನು ಊರ್ಮಿಳಾರವರಿಗೆ, ಕೆ ಟಿ ವಿಶ್ವನಾಥ್ ರವರಿಗೆ, ಚಿಕ್ಕಣ್ಣರವರಿಗೆ, ಸರ್ವೆ ನಂ 63 ರ ಈಗಿನ ಮಾಲೀಕರಿಗೆ ಕೊಟ್ಟಿರುತ್ತೇವೆ. ಎ ಷೆಡ್ಯೂಲ್ ಆಸ್ತಿಯ ಒತ್ತುವರಿ ಬಗ್ಗೆ ನಾವು ಊರ್ಮಿಳಾರವರನ್ನು ಹೊರತುಪಡಿಸಿ ಬೇರೆ ಯಾರಿಗೂ ನೋಟಿಸನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾವು ಕೊಟ್ಟಂತಹ ನೋಟಿಸ್ ಜಾರಿಯಾಗಿರುತ್ತದೆ. ನಾವು ಕೊಟ್ಟಂತಹ ನೋಟಿಸ್‌ಗಳು ಜಾರಿಯಾಗಿರುವ ದಾಖಲೆಗಳನ್ನು ನಾವು ಹಾಜರುಪಡಿಸಿಲ್ಲ ಎಂದರೆ ಎ ಡಿ ಎಲ್ ಆರ್ ರವರ ಆದೇಶದ ಪ್ರತಿಯಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ಎ ಡಿ ಎಲ್ ಆರ್ ರವರ ಆದೇಶದ ಪ್ರತಿಯನ್ನು ನನ್ನ ತಂದೆ ಮತ್ತು ಎ ಡಿ ಎಲ್ ಆರ್ ಸೇರಿ ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ಎ ಷೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ವಾದ ಪತ್ರದಲ್ಲಿ ಹಳ್ಳ ಎಂದು ನಮೂದಿಸಲಾಗಿದೆ. ದಕ್ಷಿಣಕ್ಕೆ ಹಳ್ಳ ಇರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸರ್ವೆ ಸ್ಕೆಚ್ ನಲ್ಲಿ ಹಳ್ಳ ಎಂದು ತೋರಿಸಲಾಗಿದೆ ಎಂದು ಹೇಳುತ್ತಾರೆ. ಮೂಲ ದಾಖಲಾತಿಗಳ ಪ್ರಕಾರ ಎ ಷೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ಹಳ್ಳ ಇದೆ ಎಂದು ಎಲ್ಲಿಯೂ ನಮೂದು ಇಲ್ಲ ಎಂದರೆ ನಮ್ಮ ವಿಭಾಗ ಪತ್ರದಲ್ಲಿ ನಮೂದು ಇದೆ ಎಂದು ಹೇಳುತ್ತಾರೆ.

25. ನಾವು ಎ ಷೆಡ್ಯೂಲ್ ಆಸ್ತಿಯನ್ನು ಸರ್ವೆ ಮಾಡಿಸಿದ್ದು ಎ ಷೆಡ್ಯೂಲ್ ಆಸ್ತಿ ಮೂಲತಃ 5 ಎಕರೆ ಇದ್ದು ಸರ್ವೆ ಮಾಡಿಸಿದಾಗ ಅರ್ಧ ಎಕರೆ ಜಮೀನು ಒತ್ತುವರಿಯಾಗಿದ್ದು ಕಂಡುಬಂದಿರುತ್ತದೆ ಅದೇ ರೀತಿ ಪ್ರತಿವಾದಿಯ ಒಟ್ಟು ಜಮೀನು ಅವರ ಖರೀದಿ ಪತ್ರದ ಪ್ರಕಾರ 4 ಎಕರೆ ಇದ್ದು ಸರ್ವೆಯಲ್ಲಿ 5 ಎಕರೆ 01 ಗುಂಟೆ ಎಂಬುದಾಗಿ ಕಂಡುಬಂದಿದ್ದು ಆಗ ನನಗೆ ಒತ್ತುವರಿಯಾಗಿದ್ದು ಗೊತ್ತಾಗಿದ್ದು ಬಿ ಷೆಡ್ಯೂಲ್ ಆಸ್ತಿಯನ್ನು ವಾದಪತ್ರದಲ್ಲಿ ತೋರಿಸಿರುತ್ತೇವೆ. ಬಿ ಷೆಡ್ಯೂಲ್ ಆಸ್ತಿ ಪೂರ್ತಿ ಪ್ರತಿವಾದಿಗೆ ಸೇರಿದ್ದು ನಾವು ನಮ್ಮ ಆಸ್ತಿಯೆಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

26. ಪ್ರತಿವಾದಿ 4 ಎಕರೆ ಮತ್ತು 1 ಎಕರೆ ಒಟ್ಟಾಗಿ 5 ಎಕರೆ ಜಮೀನನ್ನು ಖರೀದಿ ಮಾಡಿದ್ದರು. ಪ್ರತಿವಾದಿ ಈ ಆಸ್ತಿಯನ್ನು ಸರೋಜಮ್ಮರವರ ಕಡೆಯಿಂದ 2004 ರಲ್ಲಿ ಖರೀದಿ ಮಾಡಿದ್ದರು. ಊರ್ಮಿಳಾರವರು ಖರೀದಿ ಮಾಡಿದ 4 ಎಕರೆ ಮತ್ತು 1 ಎಕರೆ ಜಮೀನಿಗೆ ಪ್ರತ್ಯೇಕವಾಗಿ ಚಕ್ಕುಬಂದಿಯನ್ನು ತೋರಿಸಲಾಗಿದೆ ಎಂದರೆ ನಿಜ. ಸರ್ವೆ ನಂ 62/5 ರಲ್ಲಿ ನಾವು ಪ್ರತಿವಾದಿಯ 1 ಎಕರೆ ಜಮೀನನ್ನು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಪ್ರತಿವಾದಿಗೆ ಆದ ಖಾತೆಯನ್ನು ಪ್ರಶ್ನೆ ಮಾಡಿ ನಾವು ಎ ಸಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುವುದಿಲ್ಲ, ಆದರೆ ಡಿ ಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ಪ್ರತಿವಾದಿಯ ಹೆಸರಿಗೆ ಖಾತೆ 2004-05 ರಲ್ಲಿ ಆಗಿರುತ್ತದೆ. ನಾವು 2015 ರಲ್ಲಿ ಭೂ ದಾಖಲೆ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇವೆ. ನಾವು ಕೊಟ್ಟ ಅರ್ಜಿಯ ಆಧಾರದ ಮೇರೆಗೆ ಭೂ ದಾಖಲೆ ನಿರ್ದೇಶಕರು ಮಹಜರ್ ಮಾಡಿರುತ್ತಾರೆ. ಆ ಮಹಜರ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆ ನಾನು ನೋಡಿ ಹೇಳಬಹುದು.

27. ಎ ಷೆಡ್ಯೂಲ್ ಆಸ್ತಿಯನ್ನು ಸರ್ವೆ ಮಾಡುವಾಗ ಪ್ರತಿವಾದಿಗೆ ನೋಟಿಸ್ ಜಾರಿಯಾಗಿದ್ದರೂ ಸಹ ಅವರು ಹಾಜರಿರುವುದಿಲ್ಲ. ಎ ಷೆಡ್ಯೂಲ್ ಆಸ್ತಿಯಲ್ಲಿ 20 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ ಡಿ ಎಲ್ ಆರ್ ರವರಿಗೆ

ಭೂಮಿ ಒತ್ತುವರಿಯಾಗಿದೆ ಎಂದು ನಾವು ಕೊಟ್ಟ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಭೂಮಿ ಒತ್ತುವರಿಯಾಗಿರುವ ಬಗ್ಗೆ ವರದಿಯನ್ನು ಎ ಡಿ ಎಲ್ ಆರ್ ರವರು ಕೊಟ್ಟಿದ್ದು ನಾವು ಅವರಿಗೆ ಪಹಣಿ, ಕ್ರಯಪತ್ರ ಮತ್ತು ವಿಭಾಗ ಪತ್ರ ಹಾಗೂ ಪ್ರತಿವಾದಿಯ ಕ್ರಯಪತ್ರವನ್ನು ಕೊಟ್ಟಿದ್ದೆವು ಎಂದು ಹೇಳುತ್ತಾರೆ. ಪ್ರತಿವಾದಿ ಖರೀದಿ ಮಾಡಿದ 4 ಎಕರೆ ಮತ್ತು 1 ಎಕರೆ ಜಮೀನಿನ ಸ್ವಾಧೀನತೆಯನ್ನು ಅವರು ಖರೀದಿ ಪತ್ರದ ಚಕ್ಕುಬಂದಿ ಪ್ರಕಾರ ಹೊಂದಿರುತ್ತಾರೆ ಎಂದರೆ ನಿಜ, ಆದರೆ ಅವರು ಹೆಚ್ಚಿನ ವಿಸ್ತೀರ್ಣದ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ 5 ಎಕರೆ 1 ಗುಂಟೆ ಜಮೀನಿನ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಅದಕ್ಕಿಂತ ಹೆಚ್ಚು ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಆಸ್ತಿಯ ಉತ್ತರಕ್ಕೆ ಪ್ರತಿವಾದಿ ಆಸ್ತಿ ಇದೆ. ನಮ್ಮ ಆಸ್ತಿಯ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿಯಲ್ಲ.

28. ದಾವಾ ಆಸ್ತಿಯನ್ನು ನನ್ನ ತಂದೆ ಮತ್ತು ನಂಜಮ್ಮ ಅದಲು ಬದಲು ಮಾಡಿಕೊಂಡಿದ್ದರು. ದಾವಾ ಆಸ್ತಿಯನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ನನ್ನ ತಂದೆ ನನ್ನ ಅಜ್ಜಿಯ ಜೊತೆ ಅದಲು ಬದಲು ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**